ನಂ. 2. ತಾರೀಖು ೫ನೇ ಮೇ 1889.

ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ಸಬ್ ರೆಜಿಸ್ಟ್ರಾರ್ರ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸಿ ದಸ್ತಾವೇಜುಗಳನ್ನು ಕ್ರಮವಾದ ವಾರಸದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು. ತಪ್ಪಿದಲ್ಲಿ ರೆಜಿಸ್ಟ್ರೇಷ್ ಆಕ್ಟ್ 8೫ನೇ ಸೆಕ್ಷನ್ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರ.	ದಸ್ತಾವೇಜನ್ನು ಬರದುಕೊಟ್ಟವನ ಹೆಸರು ಮತ್ತು ಅಡಿಸ್ಕ್ರಿಪ್ಷನ್.	ದಸ್ತಾವೇಜನ್ನು ಬರಸಿಕೊಂಡವರ ಹೆಸರು ಮತ್ತು ಅಡಿಸ್ಕ್ರಿಪ್ಷನ್.	ರೆಜಿಸ್ಟ್ರೇಷನ್ನಿಗೆ ಹಾಜರಾದ ಸಾಕ್ಷಿಗಳ ಸಂಖ್ಯೆ.	ರೆಜಿಸ್ಟ್ರೇಷನ್ನಿಗೆ ಹಾಜರಾದ ಸಂಬಂಧಿಗಳ ಸಂಖ್ಯೆ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
361 ———— 1886—87	ಬಳಕೆರೇಲಿರುವ ವೈಷ್ಣವಬ್ರಾಹ್ಮಣ ದೊಡ್ಡನಾರಣಪ್ಪನವರ ಮಗ ಕೃಷ್ಣಪ್ಪ	ಮೈಸೂರು ದೇವರಾಜ ಮೊಹಲಾದಲ್ಲಿರುವ ಕುಂಚಿಗರ ಕಮತೀದೊಡ್ಡಯ್ಯನಮಗ ಕುಮತೀ ಸಿದ್ದಲಿಂಗಂಣ	೨	೨	ಹಾರುಹಳ್ಳಿ ಗ್ರಾಮದ ಜಮೀನ್ ಕ್ರಯಪತ್ರ ಮೊಬಲಗು 15 ರೂಪಾಯಿ.
362 ———— 1886—87	ಮೈಸೂರು ದೇವರಾಜ ಮೊಹಲಾದಲ್ಲಿರುವ ಕುಂಚಿಗರಜಾತಿ ಕಮತೀ ದೊಡ್ಡಯ್ಯನ ಮಗ ಕಮತೀ ಸಿದ್ದಲಿಂಗಂಣ	ಮೈಸೂರು ಹಾಲ್ಲೂಕು ರಾಮನಹಳ್ಳೀಲಿರುವ ಯಲೇ ಒಣಜಿಗರ ಜಾತಿ ಈರಶೆಟ್ಟಿಮಗ ಅಮ್ಮತಿತಿಮರವಾಸಯ್ಯ	೨	೨	ಆಯರಹಳ್ಳಿ ಗ್ರಾಮದ ಜಮೀನ್ ಕ್ರಯಪತ್ರ ಮೊಬಲಗು 50 ರೂಪಾಯಿ.

ಯಂ. ರಾಮಸ್ವಾಮಯ್ಯರ್,
ಛಾರ್ ರೆಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 30ನೇ ಮೇ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದು ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮೀನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಟೇಟ್ಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜರಾಬುದು ತಾಲ್ಲೂಕು ಅಮಲ್ದಾರ್ರವರ ರೂಬರೂ ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಪೊಳಪಟ್ಟು ಹರಾಜ್ ಮಾಡಿಸಲ್ಪಡುವದು.

2. ಈ ಹರಾಜ್ ಬಹಿರಂಗವಾಗಿ ದಸ್ತೂರ್ ಪ್ರಕಾರ ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವದರ ಹೆಸರಿಗೆ ಬೈಡ್ ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಬೀದಿಯ ನಾಲ್ಕರಲ್ಲಿ ಬಂದು ಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟಿಸ್ 4ನೇ ಕ್ಲಾಸು ಮೇರಿಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜ್ ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಠೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಬೀದಿಯು ಸರ್ವೇ ಖರ್ಚನ್ನು ಆಪಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ಪುಳಿಸಿಕೊಳ್ಳಲ್ಪಟ್ಟ ಜಾತಿ ಯಲ್ಲ ಮರಗಳ ಗವರ್ಮೆಂಟ್ ಹಕ್ಕನ್ನೂ ಕೇಲಸಿಕೊಂಡು ಯಿರುತ್ತೆ. ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಚಡದರಖಾಸ್ತುದಾರನು ಹರಾಜ್ ಖೈದಾದ ವಡನೆಯೇ ಕೇಕಾಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕಿ ಹಣವನ್ನ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು. ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟು ಸೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನ್ಹ ಹರಾಜ್ ಮಾಡಿಸಲ್ಪಡುವದು. 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ ಹರಾಜ್ದಾರನಿಂದ ವಸೂಲ್ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮೀನು ಮೂರು ವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು. ಈ ರಿಯಾಯಿತಿಯನ್ನು ತೋರಿಸುವದಕ್ಕೆ ಮುಂಚೆ ಚಡ ದರಖಾಸ್ತುದಾರನು ಸದರ ಜಮೀನಿನಲ್ಲಿ ಯಿರತಕ್ಕ ಸಾಗುವಳೀಲಾಯಕ್ ಪ್ರದೇಶವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಯತ್ನಪಡದೆ ಆಡವಿಯನ್ನು ತೆಗದು ಮರಗಳನ್ನು ಕಡಿದು ರಾವೇನಾಮೆ ಕೊಟ್ಟಲ್ಲದೇ ಆದರೆ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರೆದು ಕೊಡಬೇಕು.